

# ದಕ್ಷಿಣ ಕಾಶಿ ಮಹಾಕೂಟ





ಚಿತ್ರ ಬರಹ:
**ವೀರೇಶ ಯಂಗಟಿ**



ಬಾದಾಮಿಯಿಂದ ಹದಿನಾಲ್ಕು ಕಿ.ಮೀ. ದೂರದಲ್ಲಿರುವ ಮಹಾಕೂಟ ಹಿಂದೂಗಳ ಯಾತ್ರಾಸ್ಥಳ. ಇದೀಗ ಪ್ರವಾಸಿಗರ ನೆಚ್ಚಿನ ತಾಣವಾಗಿಯೂ ಗುರುತಿಸಲ್ಪಟ್ಟಿದೆ. ಚಾಲುಕ್ಯರ ಕಾಲದ ದೇಗುಲಗಳು ಮತ್ತು ಪುಷ್ಕರಣಿ ಇಲ್ಲಿನ ಆಕರ್ಷಣೆಗಳು.

ಬಾಗಲಕೋಟೆ ಜಿಲ್ಲೆಯ ಮಹತ್ವದ ಚಾರಿತ್ರಿಕ ಸ್ಥಳಗಳ ಪೈಕಿ ಚಾಲುಕ್ಯರ ರಾಜಧಾನಿ ಬಾದಾಮಿ, ಭಾರತೀಯ ದೇಗುಲಗಳ ವಾಸ್ತುಶಿಲ್ಪದ ಪ್ರಯೋಗಾಲಯ ಐಹೊಳೆ, ವಿಶ್ವ ಪರಂಪರೆಯ ಪಟ್ಟಿಯಲ್ಲಿ ಮಾನ್ಯತೆ ಪಡೆದಿರುವ ಪಟ್ಟದಕಲ್ಲು, ಮಹಾಜಾತ್ರೆಗೆ ಹೆಸರಾಗಿರುವ ಬನಶಂಕರಿ ಇವು ಪ್ರಮುಖ ಆಕರ್ಷಣೆ. ಇವುಗಳಿಗೆ ಅತ್ಯಂತ ಸಮೀಪದಲ್ಲಿರುವ ಯಾತ್ರಾಸ್ಥಳ ಮಹಾಕೂಟ.

ಪ್ರಕೃತಿ ಸೊಬಗಿನಲ್ಲಿರುವ ಮಹಾಕೂಟ ಕ್ಷೇತ್ರ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ. ಮಹಾಕೂಟ ದೇಗುಲ ಸಂಕೀರ್ಣ ಶೈವರ ಪವಿತ್ರ ಯಾತ್ರಾಸ್ಥಳ. ಆಲದ ಮರ, ಅತ್ತಿ ಮರಗಳು ಹರಡಿರುವ ಇಲ್ಲಿ ಹದಿನಾರು ದೇಗುಲಗಳಿವೆ. ಮಹಾ ಕೂಟೇಶ್ವರ ಇಲ್ಲಿನ ಮುಖ್ಯ ದೇವರು. ಚಾಲುಕ್ಯ ದೊರೆಗಳ ಆರಾಧ್ಯದೈವ ವಾಗಿದ್ದ ಇಲ್ಲಿನ ಶಿವಲಿಂಗ ಹೆಚ್ಚಿನ ಮಹತ್ವ ಪಡೆದಿದೆ. ಗರ್ಭಗುಡಿಯ ಎದುರಿಗೆ ಭವ್ಯ ನಂದಿ ಆಕರ್ಷಕವಾಗಿದೆ. ದೇವಾಲಯದ ಹೊರಗೋಡೆಯಲ್ಲಿ ಕೈಲಾಸ ಪರ್ವತ ಎತ್ತುತ್ತಿರುವ ರಾವಣ, ಶಿವಪಾರ್ವತಿಯರು ಮತ್ತು ಪುರಾಣ ಹಿನ್ನೆಲೆಯ ಯುದ್ಧದ ಸನ್ನಿವೇಶಗಳ ಸುಂದರ ಚಿತ್ರಣಗಳಿವೆ. ಕ್ರಿ.ಶ. ಆರನೆಯ ಶತಮಾನದಲ್ಲಿ ದ್ರಾವಿಡ ವಾಸ್ತುಶೈಲಿಯಲ್ಲಿ ಮಹಾಕೂಟೇಶ್ವರ ದೇಗುಲ